ಶ್ರೀ ಕೆ. ಮಲ್ಲಪ್ಪ.—588 ಅರ್ಜಿಗಳು ಬಂದಿದ್ದು ಅದರಲ್ಲಿ 39 ಅರ್ಜಿದಾರರಿಗೆ ಮಾತ್ರ ಮಾಸಾಸನ ಮಂಜೂರು ಮಾಡಲಾಗಿದೆಯೆಂದು ಹೇಳಿದ್ದೀರಿ, ಆದುದರಿಂದ ಕ್ರೀಡೆಗಳಲ್ಲಿ ಎಷ್ಟು ವಿಧವಿದೆ ? ಕಿರಿಯ ಕ್ರೀಡಾ ಪಟುಗಳ ಬೆಳವಣಿಗೆಯ ದೃಷ್ಟಿಯಿಂದ ಅವರಿಗೂ ಮಾಸಾಸನ ಕೊಡುವ ಅವಶ್ಯಕತೆ ಇಲ್ಲವೇ ?

ಶ್ರೀ ಜೀವರಾಜ್ ಆಳ್ವ.—ಕ್ರೀಡೆಗಳಲ್ಲಿ ಬಹಳ ವಿಧವಿದೆ

ಒಬ್ಬ ಮಾನ್ಯ ಸದಸ್ಯರು.—ಜಲ ಕ್ರೀಡೆ

ಶ್ರೀ ಕೆ. ಮಲ್ಲಪ್ಪ.—ಕೇವಲ 39 ಅರ್ಜಿದಾರರಿಗೆ ಮಾತ್ರ ಮಾಸಾಸನ ಕೊಟ್ಟಿದ್ದೀರಿ ಮಿಕ್ಕವರಿಗೂ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತಿರಾ ?

ಶ್ರೀ ಜೀವರಾಜ್ ಆಳ್ವ.—ಈ ಸುಮಾರು 144 ಜನರಿಗೆ ಮಾಸಾಸನ ಕೊಡುವ ಬಗ್ಗೆ ಶಿಫಾರಸ್ಸು ಮಾಡಲಾಗಿದೆ, ಇದರಿಂದ ಅದಷ್ಟು ಜನಕ್ಕೆ ಕೊಡುವುದಕ್ಕೆ ವ್ಯವಸ್ಥೆ ಮಾಡಲಾಗುತ್ತಿದೆ :—

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರದ ಪ್ರಶ್ನೆ ಪತ್ರಿಕೆಗಳನ್ನು ಸಭೆಯ ಮುಂದಿಡುವುದು.

ಚುಕ್ಕೆಗುರುತಿಲ್ಲದ ಪ್ರಶ್ನೆಗಳಿಗೆ ಕೊಡಲಾದ ಲಿಖಿತ ಉತ್ತರಗಳು :—

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಸಭೆಯ ಮುಂದಿಡುತ್ತಿದ್ದೇನೆ.

ವಿಷಯ :— ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿರುವ ಕೈದಿಗಳ ಸಂಖ್ಯೆ

ಪ್ರ. 57 (72) ಶ್ರೀ ಪಿ. ರಾಮಚಂದ್ರರಾವ್ (ಉಲ್ಲಾಳ್).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ. ಬೆಂಗಳೂರಿನ ಸೆಂಟ್ರಲ್ ಜೈಲಿನಲ್ಲಿರುವ ಖೈದಿಗಳ ಸಂಖ್ಯೆ ಎಷ್ಟು ;

ಆ. ಯಾವ ಅಪರಾಧಗಳಿಗಾಗಿ ಈ ಬಂಧನದ ಶಿಕ್ಷೆ ಅನುಭವಿಸುತ್ತಿದ್ದಾರೆ ;

ಇ. ಒಂದಕ್ಕಿಂತ ಹೆಚ್ಚು ಬಾರಿ ಬಂಧನದ ಶಿಕ್ಷೆಗೆ ಒಳಗಾಗಿರುವವರ ಸಂಖ್ಯೆ ಎಷ್ಟು ;

ಈ. ಬಂಧಿತರ ಬಿಡುಗಡೆಯಾದ ಮೇಲೆ ಅವರ ಪುನರ್ ವ್ಯವಸ್ಥೆಗಾಗಿ ಸರಕಾರದವರು ಯಾವ ಕ್ರಮ ಕೈಗೊಂಡಿದ್ದಾರೆ ಮತ್ತು ಇವರಿಗೆ ಬಿಡುಗಡೆಯ ನಂತರ ಸಾಲ ಸೌಲಭ್ಯಗಳನ್ನು ನೀಡುವ ವ್ಯವಸ್ಥೆಯನ್ನು ಮಾಡಲಾಗಿದೆಯೆ ?

ಶ್ರೀ ಜಿಗಜಿನ್ನಿ ರಮೇಶ್ ಚಂದಪ್ಪ,—(ಗೃಹ ಇಲಾಖೆಯ ರಾಜ್ಯ ಸಚಿವರು) :—

ಅ. 348

ಆ.

1.	ಭಾರತೀಯ ದಂಡ ಸಂಹಿತೆಯ 302ನೇ ವಿಧಿಯ ಅನ್ವಯ	200
2.	ಭಾರತೀಯ ದಂಡ ಸಂಹಿತೆಯ 379 ವಿಧಿ ಅನ್ವಯ	31
3.	ಭಾರತೀಯ ದಂಡ ಸಂಹಿತೆಯ 397 ವಿಧಿ ಅನ್ವಯ	4
4.	ಭಾರತೀಯ ದಂಡ ಸಂಹಿತೆಯ 420 ವಿಧಿ ಅನ್ವಯ	5
5.	ಇತರೆಯವರು	108
	ಒಟ್ಟು	348

ಇ. ಇಲ್ಲ.

ಈ. ಬಿಡುಗಡೆಯಾದ ಖೈದಿಗಳ ಪುನರ್ ವ್ಯವಸ್ಥೆಗಾಗಿ ಬಡಗಿ, ಕಮ್ಮಾರ, ನೇಯುಗೆ ಮತ್ತು ಚರ್ಮದ ಕೆಲಸಗಳನ್ನು ಮಾಡಿಕೊಳ್ಳಲು ಹಣ ಸಹಾಯವನ್ನು ಬೆಂಗಳೂರು ಕೇಂದ್ರ ಕಾರಗೃಹಕ್ಕೆ ಸಮಾಜ ಕಲ್ಯಾಣ ಇಲಾಖೆಯಿಂದ ನಿಯಮಿಸಿರುವ ಸಂಪರ್ಕಾಧಿಕಾರಿಗಳು ಒದಗಿಸುತ್ತಾರೆ, ಅಲ್ಲದೆ ಬಿಡುಗಡೆ ಹೊಂದಿಹ ಖೈದಿಗಳ ಸಹಾಯ ಸಂಘವು ಈ ರೀತಿ ಬಿಡುಗಡೆಯಾದವರ ಪುನರ್ ವಸತಿಗೆ ಸಹಾಯವು ಮಾಡುತ್ತದೆ.

ವಿಷಯ :— ರಾಜ್ಯದಲ್ಲಿ ವಿಚಾರಣೆಗೆ ಒಳಪಟ್ಟ ಕೈದಿಗಳು

ಪ್ರ. 58 (73) ಶ್ರೀ ಪಿ. ರಾಮಚಂದ್ರರಾವ್ (ಉಲ್ಲಾಳ್).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ. ರಾಜ್ಯದಲ್ಲಿ ವಿಚಾರಣೆಗೆ ಒಳಪಟ್ಟ (ಅಂಡರ್ ಟ್ರಿಯಲ್) ಕೈದಿಗಳ ಸಂಖ್ಯೆ ಎಷ್ಟು ;

ಆ. ಈ ಕೈದಿಗಳಲ್ಲಿ ಒಂದು ವರ್ಷಕ್ಕೆ ಮೀರಿದ ಅವಧಿ 2 ವರ್ಷಕ್ಕೆ ಮೀರಿದ ಅವಧಿ ಮತ್ತು 5 ವರ್ಷಕ್ಕೆ ಮೇಲ್ಪಟ್ಟು ಇನ್ನು ವಿಚಾರಣೆಯಲ್ಲಿಯೇ ಇದ್ದು ಬಂಧಿಖಾನೆಯಲ್ಲಿ ನರಳುತ್ತಿರುವ ಖೈದಿಗಳ ಸಂಖ್ಯೆ ಎಷ್ಟು ;

ಇ. ಹೀಗೆ ಶಿಕ್ಷೆಗೊಳಗಾಗುವ ಮೊದಲೇ ಸೆರೆಮನೆಗಳಲ್ಲಿ ನರಳುವ ಖೈದಿಗಳ ಸಮಸ್ಯೆಯನ್ನು ಬಗೆಹರಿಸಲು ಸರಕಾರದವರು ಯಾವ ಕ್ರಮ ಕೈಗೊಂಡಿದ್ದಾರೆ ?

ಶ್ರೀ ಜಿಗಜಿನ್ನಿ ರಮೇಶ್ ಚಂದಪ್ಪ.—(ಗೃಹ ಖಾತೆಯ ರಾಜ್ಯ ಸಚಿವರು) :—